ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ

Office of the Deputy Commissioner, Chikkaballapura District, Chikkaballapura

Telephone: 08156-277001, Fax: 08156-277002, e.mail: deo.ckbpur@gmail.com/ dc-ckbpur-ka@gov.in

ಸಂಖ್ಯೆ: ಎಲ್.ಎನ್.ಡಿ/ಸಿ.ಆರ್/ /2025-26 ಇ-690889 ದಿನಾಂಕ: As Approved below

ಅಧಿಕೃತ ಜ್ಞಾಪನ

ವಿಷಯ: ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ಕಾವಲಗಾನಹಳ್ಳಿ ಗ್ರಾಮದ ಸ.ನಂ.11 ರಲ್ಲಿ 16-00 ಎ/ಗು ಜಮೀನನ್ನು ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್(ರಿ), ಚಿಂತಾಮಣಿ ರವರಿಗೆ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ರವರ ಪ್ರಕರಣ ಸಂಖ್ಯೆ:ಡಬ್ಲ್ಯೂ.ಪಿ.13275/2017 ದಿನಾಂಕ:11/11/2021
2. ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರ ಟಿಪ್ಪಣಿ ಅನ್ವಯ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಭೂಮಂಜೂರಾತಿ-1), ಬೆಂಗಳೂರು ರವರ ಆದೇಶ ಸಂಖ್ಯೆ: E-Comp. No-1916402 ಕಡತ ಸಂಖ್ಯೆ: ಆರ್.ಡಿ-ಎಲ್.ಜಿ.ಕೆ/40/2025 ದಿನಾಂಕ: 26/12/2025 ಮತ್ತು 17/01/2026.
4. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ:ಪ್ರಾಆಕ/ಎಲ್.ಎನ್.ಡಿ/ಸಿ.ಆರ್/106/2025-26 ದಿ: 29/08/2025
5. ಉಪಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ ರವರ ಪತ್ರದ ಸಂ: ಎ3/ಲ್ಯಾಂಡ್/ಸಿಆರ್/59/2025-26 ದಿ: 19/07/2025.
6. ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ರವರ ಪತ್ರ ಸಂಖ್ಯೆ: ಎಲ್.ಎನ್.ಡಿ/ಸಿ.ಆರ್/109/2025-26ಇ-690889 ದಿ: 12/08/2025 ಮತ್ತು 27/10/2025.
7. ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರ ಪತ್ರ ಸಂಖ್ಯೆ: ಎಲ್.ಎನ್.ಡಿ/ಸಿ.ಆರ್/690889/2025-26 ದಿನಾಂಕ: 07/08/2025 & 24/10/2025.
8. ಹಿರಿಯ ಉಪನೋಂದಣಾಧಿಕಾರಿ, ಚಿಂತಾಮಣಿ ತಾಲ್ಲೂಕು ರವರ ಪತ್ರದ ಸಂ: ಉನೋಕ/ಚಿಂ/184/2025-26 ದಿ:10/12/2025
9. ಶ್ರೀ ಚೌಡರೆಡ್ಡಿ, ಮುಖ್ಯ ಪೋಷಕರು, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್(ರಿ) ಚಿಂತಾಮಣಿ ರವರ ಮನವಿಯ ದಿನಾಂಕ: 04/10/2023, 17/09/2024, 04/03/2025 , 21/08/2025 ಮತ್ತು 20/01/2026

-******-

ಮೇಲ್ಕಾಣಿಸಿದಂತೆ, 1993-94ರಲ್ಲಿ ಗುಹಾಂತರ ದೇವಾಲಯದ ಕೆಲಸವನ್ನು ಪ್ರಾರಂಭಿಸಲಾಗಿದ್ದು, ಸಾರ್ವಜನಿಕರ ಕೋರಿಕೆಯಂತೆ ಶ್ರೀ ವಲ್ಲಭಗಣಪತಿ, ಶ್ರೀ ಚತುರ್ಮುಖ ಲಿಂಗೇಶ್ವರ ಹಾಗೂ ಶ್ರೀ ಪಾರ್ವತಿ ಮೂರ್ತಿಯನ್ನು ಸಹ ಪ್ರತಿಷ್ಠಾಪಿಸಲಾಗಿರುವುದಾಗಿ, ಈ ಪೂಜಾ ಕೈಂಕರ್ಯಗಳನ್ನು ಸುಗಮವಾಗಿ ನಡೆಯಲು ಹಾಗೂ ಶ್ರೀ ಕ್ಷೇತ್ರ ಕೈಲಾಸಗಿರಿಯನ್ನು ಸರ್ವೋತೋಮುಖ ಅಭಿವೃದ್ಧಿಪಡಿಸುವ ದೂರ ದೃಷ್ಟಿಯಿಂದ 16.05.1994 ರಲ್ಲಿ ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್‌ನ್ನು ಸ್ಥಾಪಿಸಿರುವುದಾಗಿ, ದಿನಾಂಕ:- 20.08.2001 ರಲ್ಲಿ ಶ್ರೀ ಗಂಗಾಧರೇಶ್ವರ ಅನ್ನದಾನ ಟ್ರಸ್ಟ್ ಸ್ಥಾಪಿಸಿ ಅಂದಿನಿಂದ ತಹಲ್‌ವರೆಗೂ ಮಾಸಿಕವಾಗಿ ಸರಿ ಸುಮಾರು 20 ಸಾವಿರ ಭಕ್ತಾಧಿಗಳಗೆ ಅನ್ನದಾಸೋಹವನ್ನು ಆಯೋಜಿಸಲಾಗಿರುತ್ತದೆ.

ಈ ಕ್ಷೇತ್ರದ ಅಭಿವೃದ್ಧಿಗೆ ಭಕ್ತಾದಿಗಳು, ಯಾತ್ರಿಕರು, ದಾನಿಗಳು, ಚುನಾಯಿತ ಪ್ರತಿನಿಧಿಗಳಾದ ಶ್ರೀ ಕೆ. ಹೆಚ್. ಮುನಿಯಪ್ಪ, ಮಾಜಿ ಲೋಕಸಭಾ ಸದಸ್ಯರು, ದಿವಂಗತ ಶ್ರೀ ಎಸ್.ಎಂ. ಕೃಷ್ಣ ರವರು ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಶ್ರೀಮತಿ ಭಾರತಿಶೆಟ್ಟಿ ರವರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು, ದಿವಂಗತ ಶ್ರೀ ರಾಜಶೇಖರ ಮೂರ್ತಿ, ಮಾಜಿ ರಾಜ್ಯಸಭಾ ಸದಸ್ಯರು ಹಾಗೂ ಶ್ರೀ ಕೆ. ಶ್ರೀನಿವಾಸಗೌಡ, ಮಾಜಿ ಸಚಿವರು ಇವರುಗಳು ಶ್ರೀ ಕ್ಷೇತ್ರದ ಸರ್ವೋ್ತೋಮುಖ ಅಭಿವೃದ್ಧಿಗೆ ಅನುದಾನ ನೀಡಿರುತ್ತಾರೆ. ಪ್ರಸಕ್ತವಾಗಿ ಸದರಿ ಕ್ಷೇತ್ರಕ್ಕೆ ವಾರ್ಷಿಕ 2.5 ಲಕ್ಷಗಳಿಂದ 3.00 ಲಕ್ಷ ಸಂಖ್ಯೆಯ ಭಕ್ತಾಧಿಗಳು ಭೇಟಿ ನೀಡುತ್ತಿರುತ್ತಾರೆ. ಪ್ರಸ್ತುತ ಈ ಗುಹಾಂತರ ದೇವಾಲಯದ ವಿಸ್ತರಣೆ ಸುಮಾರು 20 ಸಾವಿರ ಚದರಡಿ ಹೊಂದಿದ್ದು, 12ನೇ ಶತಮಾನ ನಂತರ (ಸಾವಿರ ವರ್ಷ) ಪ್ರಪಂಚದಲ್ಲಿ ಇದು ಅತೀ ದೊಡ್ಡ ಮಾನವ ನಿರ್ಮಿತ ಗುಹಾಂತರ ದೇವಾಲಯವಾಗಿರುತ್ತದೆ ಎಂಬುದು ನಾಡಿನ ಹೆಮ್ಮೆಯ ಸಂಗತಿಯಾಗಿರುತ್ತದೆ.

ಈ ದೇವಾಲಯ ಸಂಕೀರ್ಣದಲ್ಲಿ ನಿರ್ಮಾಣವಾಗುತ್ತಿರುವ ಉದ್ಭವಲಿಂಗ ಸುಮಾರು (23.9 ಅಡಿ) ಇದ್ದು, ಇದು ಪ್ರಪಂಚದಲ್ಲಿಯೇ ಅತೀ ದೊಡ್ಡ ಮೂರ್ತಿಯಾಗಿದೆ ಎಂಬುದು ನಾಡಿನ ವಿಶಿಷ್ಟತೆಯಲ್ಲಿ ಒಂದಾಗಿದೆ. ಈ ಮೂರ್ತಿಯ ಕುಂಭಾಭಿಷೇಕವನ್ನು 2025 ರ ಉತ್ತರಾಯಣ ಮಾಸದಲ್ಲಿ ಮಾಡಲು ಯೋಜಿಸಲಾಗಿದ್ದು, ಸದರಿ ಕಾರ್ಯಕ್ರಮದ ನಂತರ ಈ ಕ್ಷೇತ್ರಕ್ಕೆ ವಾರ್ಷಿಕವಾಗಿ ಭೇಟಿ ನೀಡುವ ಭಕ್ತಾಧಿಗಳ ಸಂಖ್ಯೆ 10 ಲಕ್ಷಗಳಿಗೂ ಮಿಗಿಲಾಗುವ ಸಂಭವವಿರುತ್ತದೆ. ಶ್ರೀ ಕ್ಷೇತ್ರ ಕೈಲಾಸಗಿರಿಯನ್ನು ನಾಡಿನ ವಿಶಿಷ್ಟ ಹಾಗೂ ಮಾದರಿ ಪ್ರೇಕ್ಷಣೀಯ ಹಾಗೂ ಧಾರ್ಮಿಕ ಕ್ಷೇತ್ರವನ್ನಾಗಿ ರೂಪಿಸಲು ಹಲವು ಉತ್ತಮ ಯೋಜನೆಗಳನ್ನು ರೂಪಿಸಿದ್ದು ಈ ಯೋಜನೆಯ ಒಂದು ನೀಲಿನಕ್ಷೆಯನ್ನು ತಯಾರಿಸಲಾಗಿರುತ್ತದೆ.

ಈ ಸುಕ್ಷೇತ್ರದಲ್ಲಿ ವೇದಪಾಠಶಾಲೆ, ಗುರುಕುಲ, ಹಿಂದೂ ಧರ್ಮದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಸುಪ್ರಸಿದ್ಧ ಸಾವಿರಾರು ವರ್ಷಗಳ ಇತಿಹಾಸ ಇರುವಂತಹ ಸಂಸ್ಥೆಯೊಂದಿಗೆ ಒಡಂಬಡಿಕೆಯನ್ನು ಸಹ ಮಾಡಲಾಗುವುದಾಗಿ ಹಾಗೂ ಈ ಹಿನ್ನೆಲೆಯಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕೈಲಾಸಗಿರಿ ಕ್ಷೇತ್ರವನ್ನು ವಿಶ್ವ ವಿಖ್ಯಾತ ಕ್ಷೇತ್ರವನ್ನಾಗಿ ಮತ್ತು ಪ್ರವಾಸೋದ್ಯಮ ಕ್ಷೇತ್ರವನ್ನಾಗಿ ರೂಪಿಸಲು ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವ ನಿಟ್ಟಿನಲ್ಲಿ ಘನ ಉಚ್ಚ ನ್ಯಾಯಾಲಯ, ಬೆಂಗಳೂರು ರವರಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ: ಡಬ್ಲ್ಯೂ.ಪಿ/13275/2017 ರ ದಿನಾಂಕ:11/11/2021 ರಂದು ಹೊರಡಿಸಿರುವ ಆದೇಶವನ್ನು ಪರಿಗಣಿಸಿ, ಶ್ರೀ ಕೈಲಾಸಗಿರಿ ಕ್ಷೇತ್ರಕ್ಕೆ ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ಕಾವಲುಗಾನಹಳ್ಳಿ ಗ್ರಾಮದ ಸರ್ವೆನಂಬರ್ 11 ರಲ್ಲಿ 16-00 ಎಕರೆ ಭೂಮಿಯನ್ನು ಸರ್ಕಾರದಿಂದ ಮಂಜೂರು ಮಾಡಲು ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿ ಶ್ರೀ ಚೌಡರೆಡ್ಡಿ, ಮುಖ್ಯ ಪೋಷಕರು, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್, ಚಿಂತಾಮಣಿ ರವರು ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ರವರಿಗೆ ಉಲ್ಲೇಖ(9) ರೀತ್ಯಾ ಮನವಿಯನ್ನು ಸಲ್ಲಿಸಿದ್ದು, ಸದರಿ ಮನವಿಯ ಮೇಲೆ <u>ಸನ್ಮಾನ್ಯ ಮುಖ್ಯಮಂತ್ರಿಯವರು ಪರಿಶೀಲಿಸಿ ಪ್ರಸ್ತಾವದೊಡನೆ ಸಚಿವ ಸಂಪುಟದ ಮುಂದೆ ತರುವುದು ಎಂದು ಷರಾವನ್ನು ನಮೂದಿಸಿ</u> ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ಉಲ್ಲೇಖ(2) ರ ರೀತ್ಯಾ ಸೂಚಿಸಿರುವ ಮೇರೆಗೆ, ಉಪವಿಭಾಗಾಧಿಕಾರಿಗಳಿಂದ ಮತ್ತು ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರಿಂದ ವರದಿಯನ್ನು ಪಡೆದು ಮಾನ್ಯ ಪ್ರಾದೇಶಿಕ ಆಯುಕ್ತರ ಮುಖಾಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಈ ಕಛೇರಿಯಿಂದ ಸಲ್ಲಿಸಲಾಗಿರುತ್ತದೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ಕಾವಲಗಾನಹಳ್ಳಿ ಗ್ರಾಮದ, ಸ.ನಂ.11 ರ ಜಮೀನಿನ ವಸತಿ ನಿವೇಶನಗಳಿಗೆ ದರವು ಈ ಕೆಳಗಿನಂತೆ ಇರುತ್ತದೆ.

ಕೃಷಿ ಜಮೀನು (ರೂ.ಗಳಲ್ಲಿ)		ಕೃಷಿಯೇತರ ಜಮೀನು (ರೂ.ಗಳಲ್ಲಿ)					
		ಅಭಿವೃದ್ಧಿ ಹೊಂದದ			ಅಭಿವೃದ್ಧಿ ಹೊಂದಿದ		
ಮಾರ್ಗಸೂಚಿ ಮೌಲ್ಯ (ಪ್ರತಿ ಎಕರೆಗೆ)	ಮಾರುಕಟ್ಟೆ ಮೌಲ್ಯ (ಪ್ರತಿ ಎಕರೆಗೆ)	ಮಾರ್ಗಸೂಚಿ ಮೌಲ್ಯ (ಪ್ರತಿ ಎಕರೆಗೆ)	ಮಾರುಕಟ್ಟೆ ಮೌಲ್ಯ (ಪ್ರತಿ ಎಕರೆಗೆ)	ಚದರ ಮೀಟರ್ ಮೌಲ್ಯ	ಮಾರ್ಗಸೂಚಿ ಮೌಲ್ಯ (ಪ್ರತಿ ಎಕರೆಗೆ)	ಮಾರುಕಟ್ಟೆ ಮೌಲ್ಯ (ಪ್ರತಿ ಎಕರೆಗೆ)	ಚದರ ಮೀಟರ್ ಮೌಲ್ಯ
10,00,000/-	10,00,000/-	10,00,000/-	1,01,17,056/-	2,500/-	10,00,000/-	2,42,80,936/-	6,000/-

ದಿನಾಂಕ:18.12.2025 ರಂದು ನಡೆದ ಸಚಿವ ಸಂಪುಟವು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮೋದಿಸಿರುವಂತೆ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ಕಾವಲಗಾನಹಳ್ಳಿ ಗ್ರಾಮದ ಸ.ನಂ.11 ರಲ್ಲಿ 16-00 ಎಕರೆ/ಗುಂಟೆ ಖರಾಬು ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 27 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 22(ಎ)(2)ನ್ನು ಸಡಿಲಿಸಿ ಪ್ರಸ್ತಾಪಿತ ಜಮೀನಿನ ಪ್ರಚಲಿತ ಕೃಷಿಯೇತರ ಮಾರುಕಟ್ಟೆ ಮೌಲ್ಯದ ಶೇಕಡ 100 ರಷ್ಟು ಹಾಗೂ ಇನ್ನಿತರೆ ಶಾಸನಬದ್ಧ ಶುಲ್ಕಗಳನ್ನು ವಿಧಿಸಿ, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್ (ರಿ), ಚಿಂತಾಮಣಿ ಇವರಿಗೆ ವಿವಿಧ ಉದ್ದೇಶಗಳಾದ ಗುರುಕುಲ ವೇದ ಪಾಠಶಾಲೆ, ಅರ್ಚಕರ ತರಬೇತಿ ಕೇಂದ್ರ, ಭಕ್ತಾಧಿಗಳ/ ಸಿಬ್ಬಂದಿ ತಂಗುದಾಣ, ಅನ್ನದಾನ ಮಂದಿರ, ಹಿಂದೂ ಸಂಶೋಧನಾ ಕೇಂದ್ರ, ಮ್ಯುಜಿಯಂ, ಕಲಾ ಕೇಂದ್ರ, ತುರ್ತು ಚಿಕಿತ್ಸಾ ಕೇಂದ್ರ, ಮಠಾಧಿಪತಿಗಳ ವಿಶ್ರಾಂತಿ ಧಾಮ, ಯೋಗ ಶಾಲೆ, ಅರ್ಚಕರ ವಸತಿ ಗೃಹ, ಯಾಗ ಶಾಲಾ, ರಂಗಮಂದಿರ ಇತ್ಯಾದಿ ಉದ್ದೇಶಗಳಿಗೆ ಕೆಲವು ಷರತ್ತಿಗೊಳಪಟ್ಟು ಮಂಜೂರು ಮಾಡಿ ಆದೇಶಿಸಿದೆ.

ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ ಇ-Comp. No:1916402 File No.:RD-LGK/40/2025 : 26.12.2025 ರ ಆದೇಶದ ಭಾಗದಲ್ಲಿ "ಪ್ರಸ್ತಾಪಿತ ಜಮೀನಿನ ಪ್ರಚಲಿತ ಕೃಷಿಯೇತರ ಮಾರುಕಟ್ಟೆ ಮೌಲ್ಯದ ಶೇಕಡ 100 ರಷ್ಟು" ಎಂಬ ಪದಗಳ ಬದಲಾಗಿ "ದಿನಾಂಕ:02.01.2026 ರಂದು ನಡೆದ ಸಚಿವ ಸಂಪುಟವು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮೋದಿಸಿರುವಂತೆ ಪ್ರಸ್ತಾಪಿತ ಜಮೀನಿನ ಪ್ರಚಲಿತ ಕೃಷಿ ಮಾರ್ಗಸೂಚಿ ಮೌಲ್ಯ (Agricultural Guidance Value)" ಎಂದು ತಿದ್ದಿ ಓದಿಕೊಳ್ಳತಕ್ಕದ್ದು ಹಾಗೂ ಉಳಿದಂತೆ ಸರ್ಕಾರದ ಆದೇಶ ಸಂಖ್ಯೆ:ಇ-Comp. No.1916402 File No.:RD-LGK/40/2025-ದಿನಾಂಕ: 26.12.2025ರ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂಬುದಾಗಿ ಉಲ್ಲೇಖ(1) ರ ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿರುತ್ತದೆ.

ಅಧೀನ ಅಧಿಕಾರಿಗಳ ವರದಿ ಹಾಗೂ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ, ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ಕಾವಲಗಾನಹಳ್ಳಿ ಗ್ರಾಮದ ಸ.ನಂ. 11 ರಲ್ಲಿ ಪಹಣಿಯಂತೆ ಒಟ್ಟು ವಿಸ್ತೀರ್ಣ 188-28 ಎಕರೆ/ಗುಂಟೆ ಜಮೀನಿದ್ದು, **"ಖರಾಬು"** ಎಂಬುದಾಗಿ ವರ್ಗೀಕರಣಗೊಂಡಿರುತ್ತದೆ. ಈ ಪೈಕಿ ಸೂಕ್ತವಾದ 16-00 ಎ/ಗು ಜಮೀನನ್ನು ಗುರ್ತಿಸಿ, ಬೆಟ್ಟದಲ್ಲಿ ನಿರ್ಮಿಸಿರುವ ಗುಹಾಂತರ ದೇವಾಲಯ, ಅನ್ನದಾನ ಮಂದಿರ ಹಾಗೂ ವಾಹನ ನಿಲುಗಡೆ ಪ್ರದೇಶವನ್ನು ಒಳಗೊಂಡಂತೆ ಹಾಗೂ ಇತರೆ ಉದ್ದೇಶಗಳ ನಿರ್ಮಾಣಕ್ಕಾಗಿ ಮುಖ್ಯ ಪೋಷಕರು, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್(ರಿ) ಚಿಂತಾಮಣಿ ರವರಿಗೆ ಮಂಜೂರು ಮಾಡುವ ಬಗ್ಗೆ ಮೋಜಿಣಿದಾರರಿಂದ ನಕ್ಷೆ ತಯಾರಿಸಿ ಸಲ್ಲಿಸಿರುತ್ತಾರೆ. ಈ ಪ್ರದೇಶದಲ್ಲಿ ಯಾರೂ ಅಕ್ರಮ ಸಾಗುವಳಿ ಮಾಡಿರುವುದಿಲ್ಲ. ನಮೂನೆ-50/53 ಮತ್ತು 57 ರ ಅರ್ಜಿಗಳು ಬಾಕಿ ಇರುವುದಿಲ್ಲ. ಈ ಪ್ರದೇಶದ ಮೇಲೆ ಹೆಚ್ಚುವರಿ ವಿದ್ಯುತ್ ಲೈನ್‌ಗಳು ಹಾದುಹೋಗಿರುವುದಿಲ್ಲ ಹಾಗೂ ಪ್ರಸ್ತಾವಿತ ಜಮೀನಿನಲ್ಲಿ ಸರ್ಕಾರಕ್ಕೆ ಉಳಿಸಿಕೊಳ್ಳಬೇಕಾದ ಅಂಶಗಳಿರುವುದಿಲ್ಲವೆಂದು ಹಾಗೂ ಪ್ರಸ್ತಾವಿತ ಸ.ನಂ.11 ಮತ್ತು 12 ರಲ್ಲಿ ಒಟ್ಟು 70.80 ಹೇಕ್ಟೇರ್-ಏರ್ಸ್ ವಿಸ್ತೀರ್ಣವು ಪರಿಭಾವಿತ ಅರಣ್ಯ ಪ್ರದೇಶಕ್ಕೆ ಅಧಿಸೂಚನೆಯಾಗಿರುತ್ತದೆ. ಈ ವಿಚಾರದಲ್ಲಿ ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ರವರ ಪತ್ರ ಸಂಖ್ಯೆ:ಆರ್.ಆರ್.ಟಿ.ಸಿ.ಆರ್/1107/2024-25 ದಿನಾಂಕ:12/06/2024 ರಂತೆ ಪ್ರಸ್ತಾವಿತ ಸ.ನಂ.11 ರ ಪೈಕಿ 28-00 ಎಕರೆ ಎಂ.ಆರ್.ಟಿ 07/2024-25 ರಂತೆ ಜಮೀನು ಪರಭಾವಿತ ಕಾದಿಟ್ಟ ಅರಣ್ಯ ಎಂಬುದಾಗಿ ಹಕ್ಕುಬಂದಿರುವುದಾಗಿ ಪ್ರಸ್ತುತ ಪಹಣಿಯಲ್ಲಿ ನಮೂದಾಗಿರುತ್ತದೆ ಆದ್ದರಿಂದ ಸದರಿ --4


ಉದ್ದೇಶಿಸಿರುವ ಜಮೀನು ಪರಿಭಾವಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂಬುದಾಗಿ ಅಧೀನ ಅಧಿಕಾರಿಗಳು ವರದಿಸಿರುತ್ತಾರೆ. ಹಾಗೂ ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರು ದಿನಾಂಕ: 07/08/2025 ರಂದು ಸ್ಥಳ ತನಿಖೆ ಮಾಡಿದ್ದು, ಉಭಯ ಅಧಿಕಾರಿಗಳು ಪ್ರಸ್ತಾಪಿತ ಜಮೀನನ್ನು ಬೆಟ್ಟದಲ್ಲಿ ನಿರ್ಮಿಸಿರುವ ಗುಹಾಂತರ ದೇವಾಲಯ, ಅನ್ನದಾನ ಮಂದಿರ ಹಾಗೂ ವಾಹನ ನಿಲುಗಡೆ ಪ್ರದೇಶವನ್ನು ಒಳಗೊಂಡಂತೆ ಹಾಗೂ ಇತರೆ ಉದ್ದೇಶಗಳ ನಿರ್ಮಾಣಕ್ಕಾಗಿ ಮುಖ್ಯ ಪೋಷಕರು, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್(ರಿ) ಚಿಂತಾಮಣಿ ರವರಿಗೆ ಮಂಜೂರು ಮಾಡಲು ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಮತ್ತು ತಹಸೀಲ್ದಾರ್, ಚಿಕ್ಕಬಳ್ಳಾಪುರ ತಾಲ್ಲೂಕು ರವರು ಉಲ್ಲೇಖ(6) ಮತ್ತು (7) ರಂತೆ ಪರಿಶೀಲನೆ ಮಾಡಿ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿರುತ್ತಾರೆ.

ಉಲ್ಲೇಖ(3) ಸರ್ಕಾರದ ಆದೇಶದಂತೆ, ಕಾವಲಗಾನಹಳ್ಳಿ ಗ್ರಾಮಕ್ಕೆ ಹಾಗೂ ರಸ್ತೆಗೆ ಹೊಂದಿಕೊಂಡಿರುವ ಸ.ನಂಗಳು 3, 2, 1, 21, 20 ಹಾಗೂ 11 ರ ಜಮೀನಿನ ಮಾರ್ಗಸೂಚಿ ಮೌಲ್ಯದಂತೆ ಎಕರೆ 1ಕ್ಕೆ ರೂ.10,00,000/-ಗಳು ಇರುವುದಾಗಿ ಹಿರಿಯ ಉಪನೋಂದಣಾಧಿಕಾರಿಗಳು, ಚಿಂತಾಮಣಿ ತಾಲ್ಲೂಕು ರವರು ಉಲ್ಲೇಖ(8) ರೀತ್ಯಾ ವರದಿಯನ್ನು ಸಲ್ಲಿಸಿರುತ್ತಾರೆ.

ಅದರಂತೆ ಉಲ್ಲೇಖ(8) ರೀತ್ಯಾ ಹಿರಿಯ ಉಪನೋಂದಣಾಧಿಕಾರಿಗಳು, ಚಿಂತಾಮಣಿ ತಾಲ್ಲೂಕು ರವರ ವರದಿಯನ್ನು ಮತ್ತು ಉಲ್ಲೇಖ(3) ರ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ, "ದಿನಾಂಕ:02.01.2026 ರಂದು ನಡೆದ ಸಚಿವ ಸಂಪುಟವು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಅನುಮೋದಿಸಿರುವಂತೆ ಪ್ರಸ್ತಾಪಿತ ಜಮೀನಿನ ಪ್ರಚಲಿತ ಕೃಷಿ ಮಾರ್ಗಸೂಚಿ ಮೌಲ್ಯ (Agricultural Guidance Value) ರೂ.1,60,00,000/-ಗಳು ಹಾಗೂ ಭೂ ಪರಿವರ್ತನೆ ಶುಲ್ಕ ರೂ.6,96,960/-ಗಳು ಮತ್ತು ಪೋಡಿ ಮತ್ತು ಇತರೆ ಶುಲ್ಕ ರೂ.127/-ಗಳ ಒಟ್ಟು ರೂ.1,66,97,087/- ಗಳ ಮೊತ್ತವನ್ನು ಸರ್ಕಾರಕ್ಕೆ ಜಮಾ ಮಾಡಿ, ಜಮಾ ಮಾಡಿರುವ ಚಲನ್ ಅನ್ನು ಈ ಕಛೇರಿಗೆ ಹಾಜರುಪಡಿಸಲು ಸೂಚಿಸಲಾಯಿತು. ಅದರಂತೆ ಅರ್ಜಿದಾರರು ಚಲನ್ ಸಂಖ್ಯೆ: ಸಿಆರ್0126002900242979 ದಿನಾಂಕ: 19/01/2026 ರಂತೆ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಚಿಂತಾಮಣಿ ಶಾಖೆಗೆ ಜಮಾ ಮಾಡಿ, ಜಮಾ ಮಾಡಿರುವ ಚಲನ್ ಪ್ರತಿಯನ್ನು ಈ ಕಛೇರಿಗೆ ಉಲ್ಲೇಖ(9) ರೀತ್ಯಾ ಹಾಜರುಪಡಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಉಲ್ಲೇಖ(3) ರ ಸರ್ಕಾರದ ಆದೇಶದಂತೆ ಹಾಗೂ ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ಮತ್ತು ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕುರವರಗಳ ವರಧಿಯನ್ನಾಧರಿಸಿ ಹಾಗೂ ಕೋರಿಕೆದಾರರ ಕೋರಿಕೆಯಂತೆ, ಚಿಕ್ಕಬಳ್ಳಾಪುರ ಜಿಲ್ಲೆ, **ಚಿಂತಾಮಣಿ** ತಾಲ್ಲೂಕು, **ಅಂಬಾಜಿದುರ್ಗ** ಹೋಬಳಿ, **ಕಾವಲಗಾನಹಳ್ಳಿ** ಗ್ರಾಮದ ಸ.ನಂ.11 ರಲ್ಲಿ **ತಾಲ್ಲೂಕು ಭೂ ಮಾಪಕರು ತಯಾರಿಸಿರುವ ನಕ್ಷೆಯಂತೆ 16-00 ಎ/ಗು ಜಮೀನನ್ನು** ಈ ಕೆಳಕಂಡ ಷರತ್ತುಗಳಗೊಳಪಡಿಸಿ, **"ವಿವಿಧ ಉದ್ದೇಶಗಳಾದ ಗುರುಕುಲ ವೇದ ಪಾಠಶಾಲೆ, ಅರ್ಚಕರ ತರಬೇತಿ ಕೇಂದ್ರ, ಭಕ್ತಾಧಿಗಳ/ ಸಿಬ್ಬಂದಿ ತಂಗುದಾಣ, ಅನ್ನದಾನ ಮಂದಿರ, ಹಿಂದೂ ಸಂಶೋಧನಾ ಕೇಂದ್ರ, ಮ್ಯೂಜಿಯಂ, ಕಲಾ ಕೇಂದ್ರ, ತುರ್ತು ಚಿಕಿತ್ಸಾ ಕೇಂದ್ರ, ಮಠಾಧಿಪತಿಗಳ ವಿಶ್ರಾಂತಿ ಧಾಮ, ಯೋಗ ಶಾಲೆ, ಅರ್ಚಕರ ವಸತಿ ಗೃಹ, ಯಾಗ ಶಾಲಾ, ರಂಗಮಂದಿರ ಇತ್ಯಾದಿ ಉದ್ದೇಶಗಳ ನಿರ್ಮಾಣಕ್ಕಾಗಿ"** ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 ರ ನಿಯಮ 27 ರನ್ವಯ ಮಂಜೂರು ಮಾಡಿ, **"ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್(ರಿ)ಚಿಂತಾಮಣಿ"** ರವರಿಗೆ ವರ್ಗಾಯಿಸಿ ಆದೇಶಿಸಿದೆ.

ಚಿಂತಾಮಣಿ ತಾಲ್ಲೂಕು, ಅಂಬಾಜಿದುರ್ಗ ಹೋಬಳಿ, ಕಾವಲಗಾನಹಳ್ಳಿ ಗ್ರಾಮದ ಸ.ನಂ. 11 ರಲ್ಲಿ 16-00 ಎಕರೆ ಜಮೀನನ್ನು "ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್ (ರಿ),ಚಿಂತಾಮಣಿ" ರವರಿಗೆ ಮಂಜೂರು ಮಾಡಲು ತಯಾರಿಸಿರುವ ಜಮೀನಿನ ನಕ್ಷೆ :-



ಷರತ್ತುಗಳು:-

1. ಮಂಜೂರಾದ ಜಮೀನನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯೊಳಗೆ ಉಪಯೋಗಿಸತಕ್ಕದ್ದು.
2. ಟ್ರಸ್ಟ್ ಗೆ ಸದರಿ ಜಮೀನು ಅವಶ್ಯವಿಲ್ಲವೆಂದು ಕಂಡುಬಂದಲ್ಲಿ ಕಂದಾಯ ಇಲಾಖೆಗೆ ಹಿಂದಿರುಗಿಸತಕ್ಕದ್ದು.

--6

3. ಮಂಜೂರಾದ ಜಮೀನನ್ನು ವಿನಾಶಕಾರಿಯಾದ ಅಥವಾ ಖಾಯಂ ಆಗಿ ಹಾನಿಕಾರಕವಾಗುವ ರೀತಿಯಲ್ಲಿ ಬಳಸತಕ್ಕದ್ದಲ್ಲ ಹಾಗೂ ಯಾವುದೇ ರೀತಿಯ ಅತಿಕ್ರಮಣವಾಗದಂತೆ ಕ್ರಮವಹಿಸತಕ್ಕದ್ದು.
4. ಮಂಜೂರಾದ ಜಮೀನನ್ನು ಕಂದಾಯ ಇಲಾಖೆಯ ಅನುಮತಿ ಇಲ್ಲದೆ ಮಾರಾಟ ಮಾಡುವುದಾಗಲಿ, ಗುತ್ತಿಗೆ/ಉಪಗುತ್ತಿಗೆಗೆ ನೀಡುವುದಾಗಲಿ, ಅಡಮಾನ, ವರ್ಗಾವಣೆ, ದಾನ, ಇತರೆ ಯಾವುದೇ ರೀತಿಯ ಪರಭಾರೆ ಮಾಡಬಾರದು.
5. ಮಂಜೂರಾದ ಜಮೀನಿನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸುವ ಪೂರ್ವದಲ್ಲಿ ಶಾಸನಬದ್ಧವಾಗಿ ಪಡೆಯಬೇಕಾದ ಪರವಾನಗಿಗಳನ್ನು ಸಂಬಂಧಿತ ಪ್ರಾಧಿಕಾರಗಳಿಂದ ಪಡೆಯತಕ್ಕದ್ದು. ಹಾಗೂ ನಿಯಮಾನುಸಾರ ಪಾವತಿಸಬೇಕಾದ ಎಲ್ಲಾ ರೀತಿಯ ಶುಲ್ಕಗಳನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.
6. ಮಂಜೂರಾತಿ ಜಮೀನಿನ ಮೇಲೆ ಯಾವುದೇ ನ್ಯಾಯಲಯದಲ್ಲಿ ದಾವೆ ದಾಖಲಾಗಿದ್ದರೆ ಈ ಮಂಜೂರಾತಿಯು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.
7. ಮಂಜೂರಾದ ಜಮೀನಿನ ಯಾವುದೇ ಭಾಗವು ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವಾಗಿದ್ದಲ್ಲಿ, ಸರ್ಕಾರವು ಸದರಿ ಜಮೀನನ್ನು ಪರಿಹಾರ ನೀಡದೇ ಹಿಂತೆಗೆದುಕೊಳ್ಳುವ ಹಕ್ಕನ್ನು ಹೊಂದಿರುತ್ತದೆ.
8. ಮಂಜೂರಾದ ಜಮೀನು 1969 ರ ಕರ್ನಾಟಕ ಭೂ ಮಂಜೂರಾತಿ ನಿಯಮಗಳಿಗೆ ಬದ್ಧವಾಗಿರತಕ್ಕದ್ದು, ಸದರಿ ನಿಯಮಗಳ ಉಲ್ಲಂಘನೆಯಾದಲ್ಲಿ ಈ ಮಂಜೂರಾತಿ ಆದೇಶ ತನ್ನಷ್ಟಕ್ಕೆ ತಾನೇ ರದ್ದಾಗುವುದು ಹಾಗೂ ಯಾವುದೇ ಪರಿಹಾರ ನೀಡದೇ ಮಂಜೂರಾದ ಜಮೀನನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು.
9. ಮಂಜೂರಾದ ಜಮೀನನ್ನು ಹಸ್ತಾಂತರಿಸುವಾಗ ಮಂಜೂರಾದ ಪ್ರದೇಶದ ವಾಸ್ತವ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಉಪವಿಭಾಗಾಧಿಕಾರಿಗಳು/ ತಹಸೀಲ್ದಾರ್ ರವರು ಪೂರಕವಾದ ಷರತ್ತುಗಳನ್ನು ವಿಧಿಸಬಹುದಾಗಿದೆ.
10. ಪ್ರಸ್ತಾಪಿತ ಸ.ನಂ.11 ರಲ್ಲಿ ತಾಲ್ಲೂಕು ಭೂ ಮಾಪಕರು ತಯಾರಿಸಿರುವ ನಕ್ಷೆಯಲ್ಲಿರುವ ಖರಾಬು 0-13 ಗುಂಟೆ ಜಮೀನು ಮೀಸಲು ಆಗಿರುವ ಉದ್ದೇಶಕ್ಕಾಗಿ ಮಾತ್ರ ಬಳಸತಕ್ಕದ್ದು.
11. ಮೇಲ್ಕಂಡ ಜಮೀನಿನ ಮಾರ್ಗಸೂಚಿ ಅಥವಾ ಮಾರುಕಟ್ಟೆ ದರದ ಲೆಕ್ಕಾಚಾರದಲ್ಲಿ, ಲೆಕ್ಕಪರಿಶೋಧನಾ ಸಮಯದಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಸದರಿ ವ್ಯತ್ಯಾಸದ ಮೊಬಲಗನ್ನು ಮಾನ್ಯ ಮುಖ್ಯ ಪೋಷಕರು, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್ (ರಿ),ಚಿಂತಾಮಣಿ ರವರು ಸರ್ಕಾರಕ್ಕೆ ಪಾವತಿಸತಕ್ಕದ್ದು ಹಾಗೂ ಈ ಸಂಬಂಧ ಒಂದು ಕರಾರು ಪತ್ರವನ್ನು ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರಿಗೆ ಸಲ್ಲಿಸತಕ್ಕದ್ದು.

ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರು ಮೇಲ್ಕಂಡ ಆದೇಶದಂತೆ ಕೋರಿಕೆದಾರರು ಷರತ್ತುಗಳನ್ನು ಪಾಲಿಸುವ ಬಗ್ಗೆ ಮುಚ್ಚಳಿಕೆಯನ್ನು ಪಡೆದು, ತದನಂತರ ಪ್ರಸ್ತಾವಿತ ಜಮೀನನ್ನು ಅಳತೆ ಮಾಡಿಸಿ, ಚೆಕ್ಕುಬಂದಿ ಗುರ್ತಿಸಿ, ಎಲ್ಲಾ ಕಂದಾಯ ದಾಖಲೆಗಳಲ್ಲಿ ಸೂಕ್ತ ನಮೂದು ಮಾಡಲು ಮತ್ತು ಸದರಿ ಜಮೀನನ್ನು ಸಂಬಂಧಿಸಿದ ಮಾನ್ಯ ಮುಖ್ಯ ಪೋಷಕರು, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್ (ರಿ),ಚಿಂತಾಮಣಿ ರವರಿಗೆ 15 ದಿನಗಳೊಳಗಾಗಿ ಹಸ್ತಾಂತರಿಸಲು ನಿರ್ದೇಶಿಸಿದೆ. ಪ್ರಸ್ತಾಪಿತ ಜಮೀನಿನ ಚೆಕ್ಕುಬಂದಿಯಂತೆ ಜಮೀನಿನ ನಾಲ್ಕು ಮೂಲೆಗಳಲ್ಲಿ ಬಾವುಟಗಳನ್ನು ನಿಲ್ಲಿಸಿ, ಜಮೀನಿನ ನಾಲ್ಕು ದಿಕ್ಕುಗಳಿಂದಲೂ ರಸ್ತೆ ಸಂಪರ್ಕ ಹಾಗೂ ಬಾವುಟ ಕಾಣುವಂತೆ ಪೋಟೋ ತೆಗೆಸಿ, ಆರ್.ಟಿ.ಸಿ/ಎಂ.ಆರ್. ಪ್ರತಿಗಳೊಂದಿಗೆ ಸಲ್ಲಿಸಲು ಸೂಚಿಸಿದೆ.

ಜಿಲ್ಲಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ.

ಪ್ರತಿಯನ್ನು:-

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2. ಮಾನ್ಯ ಕಂದಾಯ ಆಯುಕ್ತರು, ಕಂದಾಯ ಆಯುಕ್ತಾಲಯ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಉಪವಿಭಾಗಾಧಿಕಾರಿಗಳು, ಚಿಕ್ಕಬಳ್ಳಾಪುರ ಉಪವಿಭಾಗ, ಚಿಕ್ಕಬಳ್ಳಾಪುರ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ತಹಶೀಲ್ದಾರ್, ಚಿಂತಾಮಣಿ ತಾಲ್ಲೂಕು ರವರಿಗೆ ವಿಶಿಷ್ಟ ಕಡತದೊಂದಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
6. ಭೂದಾಖಲೆಗಳ ಸಹಾಯಕ ನಿರ್ದೇಶಕರು, ಚಿಂತಾಮಣಿ ತಾಲ್ಲೂಕು ರವರಿಗೆ ಸೂಕ್ತ ಕ್ರಮಕ್ಕಾಗಿ.
7. ಜಿಲ್ಲಾಧಿಕಾರಿಗಳ ಆದೇಶವಾದ ನಂತರ ಭೂಮಿ ತಂತ್ರಾಂಶದ ಕಂದಾಯ ದಾಖಲೆಗಳಲ್ಲಿ ನಮೂದು ಮಾಡಲು/ ಜಿಲ್ಲಾಧಿಕಾರಿಗಳ ಲಾಗಿನ್‌ನಿಂದ ತಹಸೀಲ್ದಾರ್ ರವರ ಲಾಗಿನ್‌ಗೆ ವರ್ಗಾಯಿಸಲು ಈ ಕಛೇರಿಯ ಆರ್.ಆರ್.ಟಿ.ಶಾಖೆಯ ಮುಖ್ಯಸ್ಥರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಶ್ರೀ ಚೌಡರೆಡ್ಡಿ, ಮಾನ್ಯ ಮುಖ್ಯ ಪೋಷಕರು, ಶ್ರೀ ಗಂಗಾಧರೇಶ್ವರ ಸೇವಾ ಟ್ರಸ್ಟ್ (ರಿ).ಚಿಂತಾಮಣಿ ರವರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.